

## ನೆರಳು ಕಲಾಕೃತಿ

ಇದೊಂದು ವಿಶಿಷ್ಟವಾದ ಕಲಾ ಪ್ರಕಾರ. ಇಲ್ಲಿ ಕೇವಲ ವಸ್ತುಗಳನ್ನು ಉಪಯೋಗಿಸಿಕೊಂಡು, ಬೆಳಕಿನ ವ್ಯವಸ್ಥೆ ಮಾಡಿಕೊಂಡು ಗೋಡೆಯ ಮೇಲೆ ನೆರಳು ಬೀಳುವಂತೆ ಮಾಡಲಾಗಿದೆ. ಬಣ್ಣದ ಡಬ್ಬಿಗಳು, ಸ್ಕೆಚ್ ಪೆನ್, ಥರ್ಮಕೋಲ್ ಆಟಿಕೆ ಸಾಮಾನು ಇನ್ನಿತರ ಸಣ್ಣಪುಟ್ಟ ವಸ್ತುಗಳನ್ನು ಬಳಸಿಕೊಂಡು ಎಸ್. ಅನಿಲ್‌ಕುಮಾರ್ ಎಂಬುವವರು ಈ ಕಲೆಯನ್ನು ಮಾಡಿದ್ದಾರೆ. ಹಡಗು, ತಾಜ್‌ಮಹಲ್, ಐಫೆಲ್ ಟವರ್ ಹೀಗೆ ನಾನಾ ನೆರಳಿನ ಕಲಾಕೃತಿಗಳನ್ನು ಮಾಡಿ ಕಲಾಸಕ್ತರ, ಜನರ ಗಮನ ಸೆಳೆದಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು



## ಆಕರ್ಷಕ ಮೆಟ್ಟಿಲುಗಳ ಬಾವಿ

ರಾಜಸ್ಥಾನ ರಾಜ್ಯದ ಅಲ್ವಾರ್ ಜಿಲ್ಲೆಯಲ್ಲಿ ಈ ವಿಶೇಷ ಮೆಟ್ಟಿಲುಗಳ ಬಾವಿಯನ್ನು ಕಾಣಬಹುದು. 8 ಅಂತಸ್ತುಗಳ, 500ಕ್ಕೂ ಅಧಿಕ ಮೆಟ್ಟಿಲುಗಳ ಈ ಬಾವಿ ನೋಡಲು ಸರಳವಾದರೂ, ಅದರ ವಾಸ್ತು ಗಮನ ಸೆಳೆಯುತ್ತದೆ. ಊರಿನ ಜನರಿಗೆ ಅನುಕೂಲವಾಗಲೆಂದು ರಾಜರು ಇದನ್ನು ಕಟ್ಟಿಸಿದ್ದರು ಎನ್ನಲಾಗಿದೆ. ಮಾರ್ಬಲ್ ಕಲ್ಲುಗಳಿಂದ ನಿರ್ಮಿಸಲಾಗಿದ್ದು, ಸದಾ ತಂಪು ನೀರು ಶೇಖರಣೆಯಾಗುತ್ತದೆ. ಬೆಳಕಿಗಾಗಿ ಪ್ರತಿ 2 ಅಂತಸ್ತುಗಳಿಗೆ ದೀಪದ ಗೂಡುಗಳನ್ನು ನಿರ್ಮಿಸಲಾಗಿದೆ. ಸುಮಾರು 2 ಲಕ್ಷ ಲೀಟರ್ ನೀರನ್ನು ಇದರಲ್ಲಿ ಸಂಗ್ರಹಿಸಬಹುದಾಗಿದೆ. ನೀರು ತುಂಬಿದಾಗ ಇದರ ಕಲಾತ್ಮಕತೆ ಕಣ್ಣಿಗೆ ಕಾಣುವುದಿಲ್ಲ.

— ಕೆ.ವಿ. ಸಂತೋಷ್, ಹೊಳಲ್ಕೆರೆ

## ಶಿಲ್ಪಿಯ ಕೈಚಳಕ!

ಗುಜರಾತ್ ರಾಜ್ಯದ ಮೆಹಸಾನ ನಗರದ ಹತ್ತಿರವಿರುವ ಮೋಡೆರಾ ಸೂರ್ಯದೇವಾಲಯ ಶಿಲ್ಪಿಯ ಕೈಚಳಕದೊಂದಿಗೆ ಪ್ರವಾಸಿಗರನ್ನು ಕೈಬೀಸಿ ಕರೆಯುವ ಸುಂದರ ತಾಣ. ದೇವಾಲಯದ ಮುಂದಿರುವ ಬೃಹತ್ ಪುಷ್ಕರಣಿ ಅನೇಕ ಚಿಕ್ಕ ಗುಡಿಗಳಿಂದ ಕೂಡಿ ಕಣ್ಮನ ಸೆಳೆಯುತ್ತದೆ. ಅದರಲ್ಲಿ ಗಣೇಶನ ದೇವಾಲಯದ ಗೋಪುರ ಮನಮೋಹಕವಾಗಿದ್ದು, ಶಿಲೆಯಲ್ಲ ಈ ಗುಡಿ ಕಲೆಯ ಬಲೆ ಎಂದು ನಿರೂಪಿಸುವ ದೃಶ್ಯ ಅದ್ಭುತ!

—ಶ್ರೀಧರ ರಾಯಸಂ, ಬೆಂಗಳೂರು

